ದಿನಾಂಕ 26-11-2025 ರಂದು ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀ ಸವಾಲುಃ ವಾದಿ ಪರ ಶ್ರೀ ಪಿಎಸ್ ವಕೀಲರಿಂದಃ-

ನಾನು ಎಸ್‌ಎಸ್‌ಎಲ್‌ಸಿ ವರೆಗೆ ಕಲಿತಿದ್ದೇನೆ. ನಾನು ಖಾಸಗಿ ಕಂಪಪನಿಯಲ್ಲಿ ಕೆಲಸ ಮಾಡುತ್ತಿದ್ದೆ, ಈಗ ನಿವೃತ್ತಿಯಾಗಿದ್ದೇನೆ. ಈಗ ಕೆಂಗೇರಿಯ ಕುಂಬಳಗೂಡಿನಲ್ಲಿ ವಾಸವಿದ್ದೇನೆ. ವಾದಿಗಳು ನಮ್ಮ ಜಮೀನನ್ನು ಅಕ್ರಮವಾಗಿ ಮಾಡಿಕೊಂಡಿದ್ದಾರೆಂದು ಹಾಕಿದ್ದಾರೆ. ದಾವಾ ಸ್ವತ್ತಿನ ಸರ್ವೆ ನಂಬರ 96/2 ಅದರಲ್ಲಿ 1 ಎಕರೆ 33 ಗುಂಟೆ ಇದೆ, 7 ಗುಂಟೆ ಖರಾಬು ಸಹ ಇದೆ. ಸ.ನಂ.96/2ರಲ್ಲಿ ಖರಾಬು ಸೇರಿ 1 ಎಕರೆ 33 ಗುಂಟೆ ಮಾತ್ರ ಇದೆ ಅಂದರೆ ಸರಿಯಲ್ಲ. ವಾದಿಗಳ ತಂದೆ ಹುಚ್ಚೇಗೌಡರನ್ನು ನೋಡಿದ್ದೇನೆ. ಅವರು ದಿಃ28.07.1945ರಲ್ಲಿ ಕೆಂಪಣ್ಣನ ಮಗ ಮಾಯಾಗೌಡರಿಂದ ಖರೀದಿ ಮಾಡಿದರು ಅಂದರೆ ಗೊತ್ತಿಲ್ಲ. 1945 ರಿಂದ ವಾದಿಗಳೇ ಸ.ನಂ 96/2ರಲ್ಲಿ ಸ್ವಾಧೀನದಲ್ಲಿದ್ದರು ಅಂದರೆ ಸಾಕ್ಷಿ 50 ವರ್ಷಗಳಿಂದ ನಾನು ಇದ್ದೇನೆಂದು ನುಡಿಯುತ್ತಾರೆ.

ಸ.ನಂ.96/2 ಮೂಲತಃ ಯಾರದು ಎಂದು ನನಗೆ ಗೊತ್ತಿಲ್ಲ. ಸ.ನಂ.96/2ರಲ್ಲಿ ನಾವು ಮಾಯಣ್ಣ ಅಂದರೆ ವಾದಿಗಳ ದೊಡ್ಡಪ್ಪನ ಕಡೆಯಿಂದ ಖರೀದಿ ಮಾಡಿದೆವು. ಮಾಯಣ್ಣರವರಿಗೆ ಜಮೀನು ವಿಭಾಗದಲ್ಲಿ ಬಂದಿತ್ತು. ವಿಭಾಗದ ಪಟ್ಟಿ ನನ್ನ ಬಳಿ ಇಲ್ಲ. ಮಾಯಣ್ಣರವರಿಗೆ ಜಮೀನೇ ಇರಲಿಲ್ಲ ಅಂದರೆ ಸರಿಯಲ್ಲ. ಮಾಯಣ್ಣರವರಿಂದ ನನ್ನ ಅಣ್ಣ ಮಾಯಣ್ಣ ಅಲಿಯಾಸ್ ಮೋಟಪ್ಪ ರವರು ಖರೀದಿ ಮಾಡಿದ್ದರು. ಅವರು ಸ.ನಂ.96/2 ರಲ್ಲ್ 11 ಗುಂಟೆ , ಸ.ನಂ.96/7ರಲ್ಲಿ 22 ಗುಂಟೆಯನ್ನು ಖರೀದಿ ಮಾಡಿದ್ದರು. ಮಾಯಣ್ಣರವರು ಮಾರಾಟ ಮಾಡುವ ಕಾಲಕ್ಕೆ ಪಹಣಿ ಅವರ ಹೆಸರಿನಲ್ಲಿತ್ತು, ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. 1945ರಲ್ಲೇ ವಾದಿಗಳ ತಂದೆ ಆಸ್ತಿಯನ್ನು ಖರೀದಿ ಮಾಡಿದ್ದು ಅಂದಿನಿಂದಲೂ ವಾದಿಗಳೇ ಸ್ವಾಧೀನದಲ್ಲಿದ್ದು ವಾದಿಗಳ ದೊಡ್ಡಪ್ಪನಿಗೆ ಯಾವುದೇ ಭಾಗ ಆಗ ಹೋಗಿಲ್ಲ ಅಂದರೆ ಸರಿಯಲ್ಲ. ವಾದಿಗಳ ತಂದೆ ಖರೀದಿ ಮಾಡಿರುವ ಕ್ರಯಪತ್ರವನ್ನು ನಾನು ನೋಡಿಲ್ಲ. ವಾದಪತ್ರವನ್ನು ನಾನು ಓದಿ ತಿಳಿದುಕೊಂಡಿದ್ದೇನೆ, ಆ ನಂತರ ಸಹ

ಕ್ರಯಪತ್ರದ ಬಗ್ಗೆ ತಿಳಿದುಕೊಂಡಿಲ್ಲ.

ನನ್ನ ಅಣ್ಣ ಖರೀದಿ ಮಾಡಿದ್ದು 1969ರಲ್ಲಿ. ಕ್ರಯಪತ್ರದಲ್ಲಿ ಆಸ್ತಿ ವಿಭಾಗದಲ್ಲಿ ಬಂದಿದೆ ಎಂದು ಬರೆದಿದೆಯಾ ಅಂದರೆ ಸಾಕ್ಷಿ ಬರೆದಿಲ್ಲ, ಅನುಭವದ ಪ್ರಕಾರ ಎಂದು ಬರೆದಿದೆ. ನಿಡಿ1 ಕ್ರಯಪತ್ರದಲ್ಲಿ ಸ.ನಂ. 96/2 ರಲ್ಲಿ 1 ಎಕರೆ 26 ಗುಂಟೆ ಸ.ನಂ. 96/7 ರಲ್ಲಿ 22 ಗುಂಟೆ, ಎರಡೂ ಐಟಂ ಸೇರಿ ಎರಡು ಎಕರೆ ಎಂಟು ಗುಂಟೆಯೆಂದು ಬರೆದಿದೆ ಅಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಮುಂದುವರೆದು ಸ.ನಂ.96/2ರಲ್ಲಿ 11 ಗುಂಟೆ ಮಾತ್ರ ನಮಗೆ ಇರುವುದು, 1 ಎಕರೆ 26 ಗುಂಟೆ ಇಲ್ಲ ಎಂದು ನುಡಿಯುತ್ತಾರೆ. ವಾದಿ ಹಾಜರುಪಡಿಸಿರುವ ಕ್ರಯಪತ್ರದಲ್ಲಿ 1 ಎಕರೆ 26 ಗುಂಟೆಗೆ ದಕ್ಷಿಣಕ್ಕೆ ಬೆಟ್ಟಯ್ಯ ಎಂದು ನಮೂದು ಇದೆ ಅಂದರೆ ಸರಿ. ಆ ಚೆಕ್ಕುಬಂದಿಯ ಪ್ರಕಾರ ವಾದಿಗಳು ಅವರ ಅಣ್ಣ ತಮ್ಮಂದಿರೇ ಇದ್ದರು ಅಂದರೆ ಸಾಕ್ಷಿ ಅಣ್ಣ ತಮ್ಮಂದಿರು ಇದ್ದರು ಎಂದು ನುಡಿಯುತ್ತಾರೆ.

ನಾನು ಮತ್ತು ನನ್ನ ಅಣ್ಣ ಸೇರಿ ಮಾಯಣ್ಣರವರಿಂದ ಸುಳ್ಳು ಕ್ರಯಪತ್ರ ಬರೆಸಿಕೊಂಡಿದ್ದೇವೆ, ನಮಗೆ ಅಲ್ಲಿ ಜಮೀನೇ ಇಲ್ಲ ಅಂದರೆ ಸರಿಯಲ್ಲ. ಮಾಯಣ್ಣನಿಗೆ ಸ.ನಂ.96/7ರಲ್ಲಿ ಮಾತ್ರ ಜಮೀನು ಇರುವುದು ಅಂದರೆ ಸರಿಯಲ್ಲ. ಸ.ನಂ.96/2ರಲ್ಲಿ ನಮಗೆ ಯಾವುದೇ ಹಕ್ಕು, ಸ್ವಾಧೀನ ಇಲ್ಲ ಅಂದರೆ ಸರಿಯಲ್ಲ. ಮಾರಾಟ ಮಾಡಿದ ಮಾಯಣ್ಣನವರ ಹೆಸರಿನಲ್ಲಿ ಪಹಣಿ ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ನಾವು ಮತ್ತು ನಮ್ಮ ಅಣ್ಣ ಸೇರಿಕೊಂಡು ಕಂದಾಯ ಅಧಿಕಾರಿಗಳಿಗೆ ಸುಳ್ಳು ಅರ್ಜಿ ಸಲ್ಲಿಸಿಕೊಂಡು, ಸುಳ್ಳು ಸ್ಕೆಚ್ಚು ಮಾಡಿಸಿ ದಾಖಲೆ ಸೃಷ್ಟಿಸಿದ್ದೇವೆಂದರೆ ಸರಿಯಲ್ಲ. ಸ.ನಂ.96/2ರ ಒಟ್ಟು ವಿಸ್ತೀರ್ಣ 1 ಎಕರೆ 33 ಗುಂಟೆ ಮತ್ತು 7 ಗುಂಟೆ ಖರಾಬು ಇದೆ. ನಿಪಿ 14ರ ಪ್ರಕಾರ ಸ.ನಂ.96/2 ಖರಾಬು ಸೇರಿ 1 ಎಕರೆ 33 ಗುಂಟೆ ಅಂದರೆ ಸಾಕ್ಷಿ ಪಹಣಿಯಲ್ಲಿದೆ ಎಂದು ನುಡಿಯುತ್ತಾರೆ. 1 ಎಕರೆ 33 ಗುಂಟೆ ಮತ್ತು 7 ಗುಂಟೆ ಇದೆ ಎಂದು ತೋರಿಸಲು ದಾಖಲೆ ಹಾಜರುಪಡಿಸಬಲ್ಲೆ. ಖರಾಬು ಅನುಸರಿಸಿಕೊಂಡು ಸುಳ್ಳು ಸ್ಕೆಚ್ಚು ಮಾಡಿಸಿಕೊಂಡು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ನಿಡಿ 1 ರಲ್ಲಿ ಪೂರ್ವ-ಪಶ್ಚಿಮ 259 ಮೊಳ, ಉತ್ತರ-ದಕ್ಷಿಣ 61 ಮೊಳ ಎಂದು ಬರೆದಿದೆ ಅಂದರೆ ಸಾಕ್ಷಿ ಬರೆದಿದೆ ಅದು ಸ.ನಂ.96/7ರಲ್ಲಿ ಎಂದು ನುಡಿಯುತ್ತಾರೆ. ವಾದಿಗಳ ದೊಡ್ಡಪ್ಪ ಮಾಯಣ್ಣನವರಿಗೆ ಸ.ನಂ.96/7ರಲ್ಲಿ 22

ಗುಂಟೆ ಬಿಟ್ಟು ಬೇರೆ ಯಾವುದೇ ಜಮೀನು ಇಲ್ಲ, ಸ.ನಂ. 96/2ನ್ನು ಸೇರಿಸಿ ಸುಳ್ಳು ಕ್ರಯಪತ್ರ ಬರೆಸಿಕೊಂಡಿದ್ದೇವೆ ಅಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣ ಪ್ರಮಾಣ ಪತ್ರ ಪ್ಯಾರಾ ನಂ. 9 ರಲ್ಲಿ ಹೇಳಿರುವ ವಿಷಯಗಳು ಸುಳ್ಳು ಅಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣ ಪ್ರಮಾಣ ಪತ್ರದಲ್ಲಿ ಆ ಆಸ್ತಿ ಸರ್ವೆ ನಂಬರ 96/7ರಲ್ಲಿ, 96/2 ಸೇರಿದೆ ಎಂದು ಬರೆಸಿದ್ದೇನೆ. ವಾದಿಗಳ ತಂದೆ ರಾಮಯ್ಯನಿಗೆ 24 ಗುಂಟೆ ಕೊಟ್ಟಿದ್ದು ವಾದಿಗಳು 1 ಎಕರೆ 2 ಗುಂಟೆ ಉಳಿಸಿಕೊಂಡಿದ್ದಾರೆಂದರೆ ಸರಿಯಲ್ಲ. ಈ ವಿಷಯ ಗೊತ್ತಿದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಸಾಕ್ಷಿ ಸ್ವ-ಇಚ್ಛೆಯಿಂದ ನಮ್ಮದು 11 ಗುಂಟೆ ಬಿಟ್ಟು ವಾದಿಗಳು 31 ಗುಂಟೆಗೆ ಖಾತೆ ಮಾಡಿಸಿಕೊಂಡಿದ್ದಾರೆಂದು ನುಡಿಯುತ್ತಾರೆ.

1974-75 ರಿಂದ 1 ಎಕರೆ 26 ಗುಂಟೆ ವಾದಿಗಳ ತಂದೆ ಹುಚ್ಚೇಗೌಡರ ಹೆಸರಿಗೆ ಬರುತ್ತಿದೆ ಅಂದರೆ ಸಾಕ್ಷಿ ಅವರು ಕೈ ಬರಹದ ಪಹಣಿಯಲ್ಲಿ ಅವರು ಮಾಡಿಸಿದ್ದಾರೆಂದು ನುಡಿಯುತ್ತಾರೆ. ವಾದಿಗಳು 2008ರಲ್ಲಿ ಅರ್ಜಿನೇ ಸಲ್ಲಿಸಿಲ್ಲ ಅಂದರೆ ಸರಿಯಲ್ಲ.

ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ನೀಡಲಾಯಿತು.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

**(ಲೋಕೇಶ)**
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ರಾಮನಗರ.